ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಬಿಜಾಪುರ ಜಿಲ್ಲೆಯ ಸಿಂಧಗಿಯಲ್ಲಿ ಹೊಸದಾಗಿ ಪ್ರಾದೇಶಿಕ ಸಾರಿಗೆ ಕಛೇರಿಯನ್ನು ತೆರೆಯುವ ಯೋಜನೆ ಸರ್ಕಾರದ ಮುಂದಿರುವುದಿಲ್ಲ. ಕಾರಣ ಸಾರಿಗೆ ಇಲಾಖೆಯಲ್ಲಿ ಪ್ರಸ್ತುತ ಸಿಬ್ಬಂದಿ ಕೊರತೆಯಿದ್ದು, ನೇಮಕಾತಿ ಪ್ರಕ್ರಿಯೆಯು ಈ ಕೆಳಕಂಡ ಆಡಳಿತಾತ್ಮಕ ಕಾರಣಗಳಿಗಾಗಿ ವಿಳಂಬವಾಗಿರುತ್ತದೆ:

1. ಹೈದ್ರಾಬಾದ್–ಕರ್ನಾಟಕ ಅಭ್ಯರ್ಥಿಗಳಿಗೆ ಮೀಸಲಾತಿಯನ್ನು ಕಾಯ್ದಿರಿಸುವುದು (371–ಜೆ).
2. ಮೋಟಾರು ವಾಹನ ನಿರೀಕ್ಷಕರುಗಳ ನೇಮಕಾತಿಯ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಇರುವುದು.

ಇದರ ಜೊತೆಗೆ ಹಾಲಿ ಇರುವ ಸಿಬ್ಬಂದಿಯಲ್ಲಿಯೇ ಕಛೇರಿಯ ಕೆಲಸ ಕಾರ್ಯಗಳು, ಜಾರೀಘಟಕ ಮತ್ತು ತನಿಖಾ ಠಾಣೆಗಳ ಕೆಲಸಗಳನ್ನು ಸಹ ನಿರ್ವಹಿಸಬೇಕಾಗಿರುತ್ತದೆ.

ಸಾರಿಗೆ ಸಂಪರ್ಕ ಸೌಲಭ್ಯ ಒದಗಿಸುವುದು

2773 (3229), ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ವಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನಲ್ಲಿ ಸಾರಿಗೆ ಸಂಪರ್ಕ ಸೌಲಭ್ಯವನ್ನು ಪಡೆಯದೆ ಇರುವ ಗ್ರಾಮಗಳೆಷ್ಟು;

ಆ) ಕೆಲವೊಂದು ಗ್ರಾಮಗಳ ರಸ್ತೆಗಳು ಚೆನ್ನಾಗಿದ್ದರೂ ಸಹ ಸಾರಿಗೆ ಸಂಪರ್ಕ ಸೌಲಭ್ಯ ಪಡೆಯದ ಇರುವ ಗ್ರಾಮಗಳು ಎಷ್ಟು;

ಇ) ಈ ಗ್ರಾಮಗಳಿಗೆ ಸಾರಿಗೆ ಸಂಪರ್ಕ ಸೌಲಭ್ಯ ಕಲ್ಪಿಸದಿರಲು ಕಾರಣಗಳೇನು; (ಮಾಹಿತಿಯನ್ನೊದಗಿಸುವುದು)

ಈ) ಈ ಗ್ರಾಮಗಳಿಗೆ ಸಾರಿಗೆ ಸಂಪರ್ಕ ಸೌಲಭ್ಯ ಒದಗಿಸಲು ಬೇಕಾಗುವ ಕಾಲಮಿತಿ ಎಷ್ಟು; (ವಿವರವನ್ನೊದಗಿಸುವುದು)

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ವಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನಲ್ಲಿ 4 ಕಂದಾಯ ಗ್ರಾಮಗಳಿಗೆ ಸಾರಿಗೆ ಸೇವೆ ಒದಗಿಸಿರುವುದಿಲ್ಲ.

ಆ) ಸಿಂಧಗಿ ತಾಲ್ಲೂಕಿನಲ್ಲಿ ಒಟ್ಟು 143 ಕಂದಾಯ ಗ್ರಾಮಗಳಿದ್ದು, ಅವುಗಳ ಪೈಕಿ ಬಸ್ ಕಾರ್ಯಾಚರಣೆಗೆ ರಸ್ತೆ ಸಂಪರ್ಕವಿರುವ 139 ಕಂದಾಯ ಗ್ರಾಮಗಳಿಗೆ ಸಾರಿಗೆ ಸೇವೆ ಒದಗಿಸಲಾಗಿದೆ. ರಸ್ತೆ ಸಂಪರ್ಕ ಇದ್ದರೂ ಬಸ್ ಕಾರ್ಯಾಚರಿಸದೆ ಇರುವ ಯಾವುದೇ ಗ್ರಾಮಗಳು ಸಿಂಧಗಿ ತಾಲ್ಲೂಕಿನಲ್ಲಿ ಇರುವುದಿಲ್ಲ.

ಇ) ಸಿಂಧಗಿ ತಾಲ್ಲೂಕಿನ 4 ಕಂದಾಯ ಗ್ರಾಮಗಳಿಗೆ ಬಸ್ ಸೇವೆ ಕಲ್ಪಿಸದಿರಲು ಕಾರಣಗಳ ವಿವರಗಳು ಈ ಕೆಳಗಿನಂತಿರುತ್ತವೆ.

ಕ್ರ ಸಂ.	ಗ್ರಾಮದ ಹೆಸರು	ಬಸ್ ಸಂಪರ್ಕ ಕಲ್ಪಿಸದೇ ಇರಲು ಕಾರಣ
1	ರಾಮನಳ್ಳಿ	ಸದರಿ ಗ್ರಾಮವು ಇಂಡಿ–ಸಿಂಧಗಿ ಮಾರ್ಗದಲ್ಲಿ ಬರುವ ವಿಭೂತಿಹಳ್ಳಿಯಿಂದ ಸುಮಾರು 4.3 ಕಿ.ಮೀ. ಅಂತರದಲ್ಲಿದ್ದು ವಿಭೂತಿ ಹಳ್ಳಿಯಿಂದ ಗ್ರಾಮದವರೆಗೆ ಇಕ್ಕಟ್ಟಾದ ಬಸ್ ಸಂಚಾರಕ್ಕೆ ಯೋಗ್ಯವಲ್ಲದ ರಸ್ತೆಯಾಗಿದ್ದು ಇದರಿಂದ ಈ ಗ್ರಾಮಕ್ಕೆ ಬಸ್ ಸೇವೆ ಒದಗಿಸಿರುವುದಿಲ್ಲ. ಸದರಿ ವಿಭೂತಿ ಹಳ್ಳಿಯವರೆಗೆ ಪ್ರತಿ 15 ನಿಮಿಷಕ್ಕೊಂದರಂತೆ ಇಂಡಿ–ಸಿಂಧಗಿ ಮಾರ್ಗದಲ್ಲಿ ಕಾರ್ಯಾಚರಣೆಯಲ್ಲಿರುವ ವಾಹನಗಳಿಗೆ ವಿಭೂತಿಹಳ್ಳಿಗೆ ನಿಲುಗಡೆ ಕಲ್ಪಿಸಿದ್ದು ಈ ವಾಹನಗಳ ಸೇವೆಯನ್ನು ಸದರಿ ಗ್ರಾಮಸ್ಥರು ಪಡೆದುಕೊಳ್ಳುತ್ತಿದ್ದಾರೆ.
2	ಗುಡ್ನಳ್ಳಿ	ಸದರಿ ಗ್ರಾಮವು ಇಂಡಿ–ಸಿಂಧಗಿ ಮಾರ್ಗದಲ್ಲಿ ಬರುವ ವಿಭೂತಿಹಳ್ಳಿಯಿಂದ ಸುಮಾರು 4.3 ಕಿ.ಮೀ. ಅಂತರದಲ್ಲಿದ್ದು ವಿಭೂತಿ ಹಳ್ಳಿಯಿಂದ ಗ್ರಾಮದವರೆಗೆ ಇಕ್ಕಟ್ಟಾದ ಬಸ್ ಸಂಚಾರಕ್ಕೆ ಯೋಗ್ಯವಲ್ಲದ ರಸ್ತೆಯಾಗಿದ್ದು ಇದರಿಂದ ಈ ಗ್ರಾಮಕ್ಕೆ ಬಸ್ ಸೇವೆ ಒದಗಿಸಿರುವುದಿಲ್ಲ. ಸದರಿ ವಿಭೂತಿ ಹಳ್ಳಿಯವರೆಗೆ ಪ್ರತಿ 15 ನಿಮಿಷಕ್ಕೊಂದರಂತೆ ಇಂಡಿ–ಸಿಂಧಗಿ ಮಾರ್ಗದಲ್ಲಿ ಕಾರ್ಯಾಚರಣೆಯಲ್ಲಿರುವ ವಾಹನಗಳಿಗೆ ವಿಭೂತಿಹಳ್ಳಿಗೆ ನಿಲುಗಡೆ ಕಲ್ಪಿಸಿದ್ದು ಈ ವಾಹನಗಳ ಸೇವೆಯನ್ನು ಸದರಿ ಗ್ರಾಮಸ್ಥರು ಪಡೆದುಕೊಳ್ಳುತ್ತಿದ್ದಾರೆ.

3	ಬಿಸನಾಳ	ಸದರಿ ಗ್ರಾಮವು ಗುಲಬರ್ಗಾ–ವಿಜಾಪುರ ಮುಖ್ಯ ರಸ್ತೆಯ ಮೇಲೆ ಬರುವ ಬಿಸನಾಳ ಕ್ರಾಸ್‌ದಿಂದ ಸುಮಾರು 1.3 ಕಿ.ಮೀ. ಅಂತರದಲ್ಲಿ ಒಳಗಡೆ ಬರುತ್ತದೆ. ಬಿಸನಾಳ ಕ್ರಾಸ್ ನಿಂದ ಗ್ರಾಮದವರೆಗೆ ಚಿಕ್ಕ ಇಕ್ಕಟ್ಟಾದ ಬಸ್ ಸಂಚಾರಕ್ಕೆ ಯೋಗ್ಯವಲ್ಲದ ರಸ್ತೆ ಇರುತ್ತದೆ. ಇದರಿಂದ ಈ ಗ್ರಾಮದವರೆಗೆ ಬಸ್ ಸೇವೆ ಒದಗಿಸಿರುವುದಿಲ್ಲ. ಸದರಿ ಮಾರ್ಗದಲ್ಲಿ ಬಿಸನಾಳ ಕ್ರಾಸ್‌ವರೆಗೆ 25 ಸಾರಿಗೆ ಸಾಮಾನ್ಯ ಸಾರಿಗೆ ಸರತಿಗಳು ಕಾರ್ಯಾಚರಣೆಯಲ್ಲಿದ್ದು, ಇವುಗಳಿಗೆ ಬಿಸನಾಳ ಕ್ರಾಸ್‌ನಲ್ಲಿ ನಿಲುಗಡೆ ಕಲ್ಪಿಸಿದ್ದು ಗ್ರಾಮಸ್ಥರು ಇವುಗಳ ಸೇವೆಯನ್ನು ಉಪಯೋಗಿಸುತ್ತಿದ್ದಾರೆ.
4	ಆನೆಮಡು	ಸದರಿ ಗ್ರಾಮವು ಸಿಂಧಗಿ ಅಸಂತಾಪುರ ಮಾರ್ಗದಲ್ಲಿ ಬರುವ ಚಟ್ನಳ್ಳಿ ಗ್ರಾಮದಿಂದ 3 ಕಿ.ಮೀ. ಅಂತರದಲ್ಲಿ ಒಳಗಡೆ ಬರುತ್ತದೆ. ಚಟ್ನಳ್ಳಿ ಹಾಗೂ ಆನೆಮಡು ಮಧ್ಯೆ ಒಂದು ಹಳ್ಳವಿದ್ದು, ಬಸ್ ಕಾರ್ಯಾಚರಣೆಗೆ ರಸ್ತೆ ಸಂಪರ್ಕ ಇರುವುದಿಲ್ಲ. ಇದರಿಂದ ಸದರಿ ಗ್ರಾಮಕ್ಕೆ ಬಸ್ ಸೇವೆ ಒದಗಿಸಿರುವುದಿಲ್ಲ. ಆದರೆ ಚಟ್ನಳ್ಳಿ ಗ್ರಾಮದವರೆಗೆ 2 ಸಾರಿಗೆ ಸರತಿಗಳು ಹಾಗೂ ಅಸಂತಾಪುರದವರೆಗೆ 6 ಸಾರಿಗೆ ಸರತಿಗಳು ಕಾರ್ಯಾಚರಣೆಯಲ್ಲಿದ್ದು ಸದರಿ ಗ್ರಾಮಸ್ಥರು ಈ ಬಸ್‌ಗಳ ಸೇವೆಯನ್ನು ಉಪಯೋಗಿಸುತ್ತಿದ್ದಾರೆ.

ಈ) ಸಿಂಧಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸದರಿ 4 ಗ್ರಾಮಗಳಿಗೆ ಬಸ್ ಕಾರ್ಯಾಚರಣೆಗೆ ಯೋಗ್ಯ ರಸ್ತೆ ಕಲ್ಪಿಸಿದ ನಂತರ ಮಾರ್ಗ ಸಮೀಕ್ಷೆ ಕೈಗೊಂಡು ತಕ್ಷಣ ಬಸ್ ಸೇವೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಸಾರ್ವಜನಿಕ ಆಸ್ಪತ್ರೆಗಳು

2774 (3290), ಶ್ರೀ ಚಕ್ಕಮಾದು ಎಸ್. (ಹೆಚ್.ಡಿ.ಕೋಟೆ)

ಅ) ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ತಾಯಿ ಮತ್ತು ಮಗುವಿನ ಆರೈಕೆ ಮಾಡಲು ಪ್ರತ್ಯೇಕ ಪರಿಣಿತ ವೈದ್ಯರ ತಂಡವಿಲ್ಲದೆ ಹಾಗೂ ಪ್ರತ್ಯೇಕ ಘಟಕವಿಲ್ಲದೆ ಸಾಮಾನ್ಯ ವೈದ್ಯಾಧಿಕಾರಿಯವರು ಅಗತ್ಯ ಸಲಕರಣೆಗಳಿಲ್ಲದೆ ಹೆರಿಗೆ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;